PURNA CHETANA TRUST (R)

# PURNA CHETANA PUBLIC SCHOOL

*Creating India's Greatest Minds*

CBSE AFFILIATION
No. 830693

# ಪೂರ್ಣ ಚೇತನ ಚಿಣ್ಣರ ಮೇಳ – 2019

## ಮಾಧ್ಯಮ ಪ್ರಕಟಣೆ

ಖ್ಯಾತ ರಂಗಕರ್ಮಿ, ರಂಗ ನಿರ್ದೇಶಕ ಹಾಗೂ **ಝೀ ಕನ್ನಡ ವಾಹಿನಿಯ ಹೆಮ್ಮೆಯ ಕನ್ನಡಿಗ ಪ್ರಶಸ್ತಿಗೆ ಭಾಜನರಾಗಿರುವ ಮೈಮ್ ರಮೇಶ್** ರವರ ಮುಂದಾಳತ್ವದಲ್ಲಿ ಪೂರ್ಣಚೇತನ ಚಿಣ್ಣರ ಮೇಳವನ್ನು ಏಪ್ರಿಲ್ 14ರಿಂದ ಮೇ 5ರವರೆಗೆ 21 ದಿನಗಳ ಕಾಲ ನಡೆಸಲು ಉದ್ದೇಶಿಸಲಾಗಿದೆ. **ಪೂರ್ಣಚೇತನ ಪಬ್ಲಿಕ್ ಶಾಲೆ ಹಾಗೂ ಫಿಯರ್ ಫ್ಯಾಕ್ಟರ್** (ಮೈಸೂರಿನ ಮೊದಲ ಸುಸಜ್ಜಿತ ಅಡ್ವೆಂಚರ್ ಥೀಮ್ ಪಾರ್ಕ್) ನೇತೃತ್ವದಲ್ಲಿ ಈ ಬೇಸಿಗೆ ಶಿಬಿರ ನಡೆಸಲಾಗುತ್ತಿದೆ. ಮಕ್ಕಳಿಗಾಗಿ ಆಯೋಜಿಸಿರುವ ಈ ಬೇಸಿಗೆ ಶಿಬಿರದಲ್ಲಿ ರಂಗಭೂಮಿ, ಸಾಹಸ ಆಟಗಳು, ಸುಸ್ಥಿರ ಜೀವನ ಸೇರಿದಂತೆ ಹಲವು ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. 15 ಎಕರೆ ವಿಶಾಲವಾದ ಹಸಿರಿನಿಂದ ಕೂಡಿದ ಪರಿಸರದಲ್ಲಿ ಈ ಚಿಣ್ಣರ ಮೇಳ ನಡೆಯಲಿದೆ. ಈ ವಿಷಯವನ್ನು ತಮ್ಮ ಪತ್ರಿಕೆ, ವಾಹಿನಿ ಹಾಗೂ ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಕಟಿಸಬೇಕೆಂದು ಕೋರುತ್ತೇವೆ.

**ಬೇಸಿಗೆ ಶಿಬಿರದ ವಿವರಗಳು:**

- ಶಿಬಿರವು ಏಪ್ರಿಲ್ 14ರಿಂದ ಮೇ 5ರವರೆಗೆ ನಡೆಯಲಿದೆ
- 5 ರಿಂದ 15 ವರ್ಷದೊಳಗಿನ ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು
- ಮಾನಂದವಾಡಿ ರಸ್ತೆಯ ಚಿತ್ರವನ ರೆಸಾರ್ಟ್ ಎದುರು ಇರುವ ಪೂರ್ಣಚೇತನ ಪಬ್ಲಿಕ್ ಶಾಲೆಯ 15 ಎಕರೆ ವಿಶಾಲ ಕ್ಯಾಂಪಸ್ ನಲ್ಲಿ ಈ ಶಿಬಿರ ನಡೆಯಲಿದೆ
- ಶಿಬಿರವು ಪ್ರತಿದಿನ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೂ ಇರುತ್ತದೆ
- ಶಿಬಿರದಲ್ಲಿ ನಾಟಕ, ಜಾನಪದ ಹಾಡುಗಳು, ರಂಗಭೂಮಿ ಹಾಡುಗಳು, ಜಾನಪದ ನೃತ್ಯ, ಚಿತ್ರಕಲೆ, ವ್ಯಕ್ತಿತ್ವ ವಿಕಸನ ತರಬೇತಿ ನೀಡಲಾಗುತ್ತದೆ
- ಹೈನುಗಾರಿಕೆ, ನೈಸರ್ಗಿಕ ಹಾಗೂ ಸಾವಯವ ಕೃಷಿ ಬಗ್ಗೆ ಮಾಹಿತಿ ಹಾಗೂ ತರಬೇತಿ ನೀಡಲಾಗುತ್ತದೆ. ಜೊತೆಗೆ ಕೆಸರು ಗದ್ದೆ ಓಟ, ರೈನ್ ಡ್ಯಾನ್ಸ್, ಎತ್ತಿನ ಬಂಡಿ ಓಟ, ಪರಿಸರ ಸ್ನೇಹಿ ವಸ್ತುಗಳ ತಯಾರಿ ಸೇರಿದಂತೆ ಹಲವಾರು ತರಬೇತಿಗಳು ಹಾಗೂ ಆಟಗಳನ್ನು ಆಡಿಸಲಾಗುತ್ತದೆ.
- ಇನ್ನು ಸುಸಜ್ಜಿತವಾಗಿ ಫಿಯರ್ ಫ್ಯಾಕ್ಟರ್ ಅಡ್ವೆಂಚರ್ ಪಾರ್ಕ್ ನಲ್ಲಿ ವಿವಿಧ ರೀತಿಯ ಸಾಹಸ ಕ್ರೀಡೆಗಳನ್ನು ಆಡಿಸಲಾಗುತ್ತದೆ.
- ಪ್ರವೇಶ ಶುಲ್ಕ 3500 ರೂಪಾಯಿಗಳು (ವ್ಯಾನ್ ಶುಲ್ಕ ಸೇರಿ)
- ಮೈಸೂರಿನ ಯಾವುದೇ ಭಾಗದಿಂದ ಬರುವ ಮಕ್ಕಳಿಗೆ ಸಾರಿಗೆ ವ್ಯವಸ್ಥೆ ಇದೆ
- ಬೇಸಿಗೆ ಶಿಬಿರದ ಅರ್ಜಿಗಳನ್ನು ಈ ಕೆಳಗಿನ ಸ್ಥಳಗಳಲ್ಲಿ ವಿತರಿಸಲಾಗುತ್ತದೆ.

  ಅ. ಪೂರ್ಣ ಚೇತನ ಪಬ್ಲಿಕ್ ಶಾಲೆ, ಚಿತ್ರವನ ರೆಸಾರ್ಟ್ ಎದುರು, ಮಾನಂದವಾಡಿ ರಸ್ತೆ, ಮೈಸೂರು. ಫೋನ್: 0821-2972313, 9606044112/3

  ಆ. ಇಂಡಿಯನ್ ಟಿವಿ ಕಚೇರಿ, ನಂ.77, 8ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು. ಫೋನ್: 8880777817

  E. ಕುಕ್ಕರಹಳ್ಳಿ ಕೆರೆ ಮುಂಭಾಗ ( ರೈಲ್ವೆ ಗೇಟ್) - 9606044116

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಪೂರ್ಣಚೇತನ ಪಬ್ಲಿಕ್ ಶಾಲೆ -9606044112, 9606044113**